ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸೆಷನ್ಸ್ ಕೇಸ್ ನಂಬರ್ : 21/2021**
**ಫ್ರಾಸಾ- 11 ಚಾಸಾ- 9**

ಸಾಕ್ಷಿದಾರರ ಹೆಸರುಃ : ಸುಪ್ರೀತ್

ತಂದೆಯ ಹೆಸರುಃ : ನಾಗರಾಜು ಎ

ವಯಸ್ಸುಃ : 36 ವರ್ಷ

ಉದ್ಯೋಗಃ : ವ್ಯವಸಾಯ

ವಾಸ : ಹಳೇಬೀಡು

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ:27-02-2026:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ಈಗ ತೋರಿಸಿದ ದಾಖಲೆ ನಿಪಿ-5ರಲ್ಲಿರುವ ರುಜು ನನ್ನದೆ. ಅದನ್ನು ನಿಪಿ-5(ಸಿ) ಎಂದು ಗುರುತಿಸಲಾಯಿತು. 5 ವರ್ಷಗಳ ಹಿಂದೆ ಹಳೇಬೀಡು ಪಿ ಎಸ್ ನಲ್ಲಿ ಈ ಸಹಿ ಹಾಕಿರುತ್ತೇನೆ. ಚಾಸಾ-6ರವರು ಅವರ ಮಗನಿಗೆ ಸಂಬಂಧಪಟ್ಟ ಬಟ್ಟೆಯನ್ನು ಠಾಣೆಯಲ್ಲಿ ಹಾಜರುಪಡಿಸಿದರು. ಅದು ಒಂದು ಪ್ಯಾಂಟು ಶರ್ಟ್ ಆಗಿತ್ತು. ಅದು ಸುಟ್ಟುಹೋಗಿತ್ತು. ಅದನ್ನು ನೋಡಿದರೆ ಗುರುತಿಸುತ್ತೇನೆ. ಅವು ನ್ಯಾಯಾಲಯದ ಮುಂದಿರುವ ಎಂ.ಒ.4 ಮತ್ತು 5 ಆಗಿರುತ್ತವೆ ಅವುಗಳನ್ನು ವಶಪಡಿಸಿಕೊಂಡು ಪೊಲೀಸರು ಮಾಡಿದ ಮಹಜರಿಗೆ ಸಹಿ ಹಾಕಿರುತ್ತೇನೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

ನಾನ, ಚಾಸಾ-6, 8 ರವರು ಒಂದೇ ಊರಿನವರು. ಮಹಜರಿಗೆ ಬರುವಂತೆ ನೋಟೀಸು ನೀಡಿರುತ್ತಾರೆ. ನಾನು ಹೋದಾಗ ಚಂದ್ರಶೇಖರ್ ಮತ್ತು ಪೊಲೀಸರು ಇದ್ದರು. ಮಹಜರನ್ನು ಯಾರು ಬರೆದಿದ್ದೆಂದು ಗೊತ್ತಿಲ್ಲ. ಮಹಜರಿನಲ್ಲಿ ಏನು ಬರೆದಿದೆ ಎಂದು ಕೂಡ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಮಹಜರಿನಡಿ ಶರ್ಟು, ಪ್ಯಾಂಟು, ವಶಪಡಿಸಿಕೊಂಡರು, ಅದು ಚಂದ್ರಶೇಖರ್ ರವರ ಮಗನಿಗೆಸೇರಿದ್ದು. ಆ

ಬಟ್ಟೆಗಳನ್ನು ಚಂದ್ರಶೇಖರ್ ಎಲ್ಲಿಂದ ತಂದದ್ದೆಂದರೆ ಸಾಕ್ಷಿಯು ಮನೆಯಿಂದ ತಂದದ್ದು ಎನ್ನುತ್ತಾರೆ. ನಾನು ಚಂದ್ರಶೇಖರ್ ರವರಿಗೆ ಪರಿಚಯಸ್ಥನಾದ್ದರಿಂದ ಅವರ ಕೋರಿಕೆ ಮೇರೆಗೆ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಮಹಜರಿನಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**